**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**
**ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ**
ಬಿದರೆಗುಡಿ ಕಾವಲು, ಕೊನೇಹಳ್ಳಿ, –572 202 ಕಸಬಾ ಹೋಬಳಿ
ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ

# ರೈತ ವಿಜ್ಞಾನಿಯಾದಾಗ

ಕೃಷಿ ವಿಷಯದಲ್ಲಿ ವಿದ್ಯಾಭ್ಯಾಸ ಪಡೆದು ಅದರಲ್ಲಿ ಆಳವಾದ ಜ್ಞಾನ ಹೊಂದಿ ಕೃಷಿಯಲ್ಲೇ ಉನ್ನತ ವ್ಯಾಸಂಗ ಮುಗಿಸಿ ಆಧುನಿಕ ತಂತ್ರಜ್ಞಾನವನ್ನು ಕಂಡುಹಿಡಿಯುವುದು ವಾಡಿಕೆ ಹಾಗೂ ಪ್ರಸಿದ್ಧಿಯಾಗುವುದು ಸಹಜ, ಆದರೆ ತನ್ನ ಸುಧೀರ್ಘ ಅವಧಿಯವರೆಗೆ ಕೃಷಿಯಲ್ಲಿ ಅನುಭವ ಪಡೆದು ಯುವಕನಾಗಿ ಬೇರೆ ದುಷ್ಚ್ಟಗಳಿಗೆ ದಾಸನಾಗದೇ ಕೃಷಿ ಕ್ಷೇತ್ರದಲ್ಲಿ ಹಂಬಲವಿದೆಯಲ್ಲಾ? ಅದು ಒಂದು ಹೆಮ್ಮೆಯ ವಿಷಯ. ಘಪಟೂರು– ಅರಸೀಕೆರೆ ಭಾಗದಲ್ಲಿ ಹೆಚ್ಚಾಗಿ ತೆಂಗು ಬೆಲೆಯುತ್ತಾರೆ. ಆದರೆ ಇತ್ತೀಚಿನ ದಿನದಲ್ಲಿ ಅತಿ ಪರಿಣಾಮಕಾರಿಯಾದ ರೋಗ ಮತ್ತು ಕೀಟ ಭಾದೆ ಅದರಲ್ಲೂ ನಮ್ಮ ರೈತ ಭಾಂಧವರ ಅವೈಜ್ಞಾನಿಕ ನಿರ್ವಹಣೆಯಿಂದ ಇಳುವರಿ ಕುಂಠಿತವಾಗಿ ಮರವೇ ಸೊರಗಿಹೋಗಿದೆ ಅಂತೆಯೇ ಮರವೂ ತುಂಬಾ ಸಧೃಡವಾಗಿದ್ದು ರೋಗ ಅಥವಾ ಕೀಟಕ್ಕೆ ತುತ್ತಾಗದೇ ಉತ್ತಮ ನಿರ್ವಹಣೆ ಪಡೆದು ಅಧಿಕ ಇಳುವರಿ ಕೊಡುತ್ತದ್ದರೆ ಒಮ್ಮೊಮ್ಮೆ ಕಾಡುವುದು ಇಲಿಗಳ ಕಾಟ. ರೈತ ಏನೋ ಇಳುವರಿ ಗುಣ ಚೆನ್ನಾಗಿದೆಯೆಂದು ಒಳ್ಳೆಯ ಲಾಭ ಪಡೆಯಬಹುದೆಂದು ಅಪೇಕ್ಷಿಸಿರುತ್ತಾನೆ. ಆದರೆ ಈ ಇಲಿಗಳ ಕಾಟದಿಂದ ತನ್ನ ಎಲ್ಲಾ ಆಸೆಗಳಿಗೆ ಏಳ್ಳು ನೀರು ಬಿಟ್ಟು ಕೊಳ್ಳುತ್ತಾನೆ ಹೌದು. ಇಲಿಗಳು ಮರದ ಮೇಲೆ ಹತ್ತಿ ಇರುವ ಏಳನೀರನ್ನು ತನ್ನ ಬುದ್ದಿ ಶಕ್ತಿಯಿಂದ ಕುಡಿದು ಅಧಿಕ ಪ್ರಮಾಣದಲ್ಲಿ ನಷ್ಟವನ್ನು ಉಂಟುಮಾಡುತ್ತದೆ.

ಈ ಎಲ್ಲಾ ವಿಷಯಗಳನ್ನು ಮನಗೊಂಡ ಒಬ್ಬ ಯುವ ರೈತನು ಔಷಧಿಯನ್ನು ಉಪಯೋಗಿಸದೆ ಇಲಿಗಳ ನಿಯಂತ್ರಣ ಮಾಡಲು ಪಣತೊಟ್ಟು ಭೌತಿಕವಾಗಿ ಇಲಿಗಳ ನಿಯಂತ್ರಣ ಮಾಡುವ ಯಂತ್ರವನ್ನು ತಯಾರಿಸಿ ನಾಂದಿಯಾದರು.

ಆ ರೈತ ವಿಜ್ಞಾನಿಯೇ, ಶ್ರೀಯುತ ಅರುಣ್‌ಕುಮಾರ್ ಎಸ್.ಆರ್. ಓದಿದ್ದು ಕೃಷಿ ವಿಷಯವಲ್ಲ ಅದು ಬಿ.ಎಸ್ಸಿ. ಸುಧೀರ್ಘ ಅನುಭವ ಪಡೆದಿದ್ದು ಕೃಷಿ ವಿದ್ಯಾಭ್ಯಾಸವಲ್ಲ ಕೃಷಿ ಜ್ಞಾನದಲ್ಲಿ ಅದೂ ತನ್ನ ಜಮೀನಿನಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಇವರ ವಾಸಸ್ಥಳ ವಯಸ್ಸು ಬರೋಬರಿ 35 ರ ಅಸುಪಾಸು. ಸುಮಾರು 8–10 ಎಕರೆ ಜಮೀನನ್ನು ಹೊಂದಿರುವ ಇವರು ಸಾವಯವ ಕೃಷಿಯಲ್ಲಿ ತೊಡಗಿದ್ದಾರೆ. ಹಾಗೂ ಜಮೀನಿನಲ್ಲಿ ಎರೆಹುಳು ಸಾಕಾಣೆ ಜೀವಾಮೃತ ತಯಾರಿಸಿ ಉಪಯೋಗಿಸುವುದು, ಹನಿ ನೀರಾವರಿ ಪದ್ಧತಿ ಆಳವಡಿಕೆ ಹಾಗೂ ಇನ್ನಿತರ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ. ತೆಂಗು, ಅಡಿಕೆ, ವೆನಿಲ್ಲಾ ಕೋಕೋ, ರಾಗಿ, ಭತ್ತ ಇತರೆ ಪ್ರಮುಖವಾದ ಬೆಳೆಗಳನ್ನು ಬೆಳೆಯುತ್ತಿರುತ್ತಾರೆ. ಕೃಷಿಯಲ್ಲಿ ಅತೀವ ಆಸಕ್ತಿ ಹೊಂದಿರುವ ಇವರು ಹೊಸ–ಹೊಸ ತಳಿಗಳು ಹಾಗೂ ತಂತಜ್ಞಾನವನ್ನು ಕಂಡುಹಿಡಿಯುವಲ್ಲಿ ಹಾಗೂ ಅಳವಡಿಸಿಕೊಳ್ಳುವಲ್ಲಿ ನಿಸ್ಸೀಮರು ಹೌದು ಎನಿಸುತ್ತದೆ. ಏಕೆಂದರೆ ಅವರ ಜಮೀನಿನಲ್ಲಿ ಅರಿಶಿನ, ಕಾಫಿಗಿಡ, ವೆನಿಲ್ಲಾ ಹಾಗೂ ಬದುಗಳಲ್ಲಿ ಗೊಬ್ಬರದ ಗಿಡಗಳು, ಕೃಷಿ ತ್ಯಾಜ್ಯಗಳಿಂದ ಕಾಂಪೋಸ್ಟ್ ಮಾಡುವುದು ಇದಕ್ಕೆ ಉದಾಹರಣೆ.

ಖರ್ಚು ಕಡಿಮೆ, ರಾಸಾಯನಿಕ ವಿಧಾನವಲ್ಲದೆ ಭೌತಿಕವಾಗಿ ಇಲಿ ಕತ್ತರಿಯನ್ನು ಉಪಯೋಗಿಸಿ ತೋಟಗಾರಿಕಾ ಬೆಳೆಗಳಲ್ಲಿ ಇಲಿ ಹಾಗೂ ಅಳಿಲುಗಳನ್ನು ನಿಯಂತ್ರಣ ಮಾಡಬಹುದು ತನ್ನ ಜಮೀನಿನಲ್ಲಿರುವ ತೆಂಗಿನ ಮರದಲ್ಲಿ ಸುಮಾರು ಒಂದು ವರ್ಷಕ್ಕೆ 3000–4000 ತೆಂಗಿನಕಾಯಿಗಳು ಹಾಗೂ 3–4 ಕ್ವಿಂಟಾಲ್ ಅಡಿಕೆ ಕಾಯಿಗಳು ಇಲಿಗಳಿಂದ ಹಾಳಗುತ್ತಿತ್ತು. ಆದರೆ ಈ ಇಲಿ ಕತ್ತರಿಯನ್ನು ಉಪಯೋಗಿಸುವುದರಿಂದ ಸುಮಾರು 70 ಭಾಗ ನಷ್ಟವನ್ನು ಕಡಿಮೆಮಾಡಬಹುದು.

ದೂ:9449866936, ಮಿಂಚಂಚೆ:kvktumkur@gmail.com, ಜಾಲತಾಣ: http://kvktumakuru.org/

ಈ ಸಾಧನದ ಬಗ್ಗೆ ದೂರದರ್ಶನ ಕೃಷಿ ಮೇಳ ಹಾಗೂ ಪತ್ರಿಕಾ ಮಾಧ್ಯಮದ ಮೂಲಕ ಅನೇಕ ರೈತ ಭಾಂದವರಿಗೆ ನೆರವಾಗಲು ಸಹಾಯವಾಗಿದ್ದಾರೆ. ಹಾಗೂ ಅನೇಕ ರೈತರು ಈ ವಿಧಾನವನ್ನು ಆಳವಡಿಸಿಕೊಂಡು ನಷ್ಟವನ್ನು ತಗ್ಗಿಸಿಕೊಂಡಿದ್ದಾರೆ. ಬೋನಿನ ಮೂಲಕ ಇಲಿ ನಿಯಂತ್ರಣ ಮಾಡಿದರೆ 3–4 ಇಲಿಗಳು ಜಮೀನಿನಲ್ಲಿ ಬಿದ್ದ ಮೇಲೆ ಇನ್ನಿತರ ಇಲಿಗಳು ಬೀಳುವುದಿಲ್ಲ. ಜಿಂಕ್ ಫಾಸ್ಫೈಡ್‌ನ್ನು ರಾಗಿ ಹಿಟ್ಟಿನ ಜೊತೆ ಮಿಶ್ರಣ ಮಾಡಿ ನಿಯಂತ್ರಣ ಮಾಡಿದರೆ ಇಲಿ ನಿಯಂತ್ರಣ ಅತಿ ಕಡಿಮೆ. ಹಾಗೂ ಔಷಧಿಯ ವಾಸನೆ ಹೋದ ಮೇಲೆ ಅಥವಾ ಮಳೆ ಬಿದ್ದರೆ ಉಪಯೋಗ ಶೂನ್ಯ.

ಆದರೆ ಇಲಿ ನಿಯಂತ್ರಣ ಕತ್ತರಿಯನ್ನು ಉಪಯೋಗಿಸಿದರೆ ಇಲಿ ನಿಯಂತ್ರಣದ ಭಾಗ ಶೇಕಡ ಸುಮಾರು 70. ಈ ಸಾಧನವು ಹಳೇತಟ್ಟೆ (ಮಂಕರಿ, ಬಿದಿರಿನ ಕುಕ್ಕೆ) ಇಲಿ ಕತ್ತರಿ ಕೊಬ್ಬರಿ ಅಥವಾ ಕಬ್ಬಿಣದ ತಂತಿಯಿಂದ ಕೂಡಿದೆ. ತಟೆಯ ನಾಲ್ಲು ಕಡೆಗೆ ಕಬ್ಬಿಣದ ತಂತಿಯಿಂದ ಕಟ್ಟಿ ಅದಕ್ಕೆ ಬಟ್ಟೆ ಬನಹಾಕಲು ಬಳಸುವ ಪ್ಲಾಸ್ಟಿಕ್ ದಾರದ ಒಂದು ತುದಿ ಕಟ್ಟಿ ಅದನ್ನು (ಕವಣೆಯ ತರಹದ) ತೆಂಗಿನ ಅಥವಾ ಅಡಿಕೆ ಮರದ ಮೇಲೆ ಇಡುವುದು ಹಾಗೂ ದಿನಕ್ಕೊಮ್ಮೆ ವಿಕ್ಷಣೆ ಮಾಡುವುದು, ಹೀಗೆ ಈ ಸಾಧನದಿಂದ ಸುಮಾರು ಇಲಿಗಳು ಹಾಗೂ ಅಳಿಲನ್ನು ನಿಯಂತ್ರಣ ಮಾಡಬಹುದು ಹಾಗೂ ಸತ್ತ ಲಿಗಳನ್ನು ಸುಡಬೇಕು ಅಥವಾ ಮಣ್ಣಿನಲ್ಲಿ ಮುಚ್ಚಬೇಕು.ಸತ್ತ ಇಲಿಗಳನ್ನು ತೆಗೆಯಲು ಕಟಿಂಗ್ ಪ್ಲೇಯರ್ ಉಪಯೋಗಿಸಬೇಕು. ಬಹು ಎತ್ತರದ ಮರಗಳಿಗೆ ಮರ ಹತ್ತುವವರನ್ನು ಹತ್ತಿಸಿ ಸಾಧನವನ್ನು ಇಡಿಸಬೇಕು ಹಾಗೂ ಪ್ಲಾಸ್ಟಿಕ್ ದಾರವನ್ನು ಕಟ್ಟಿ ಕೆಳಗೆ ಬಿಡುವುದರಿಂದ ಭಾವುಟದ ರೀತಿ ತಟ್ಟಿಯನ್ನು ಕೆಳೆಗೆ ಇಳಿಸಿಕೊಳ್ಳಬಹುದು.

20–30 ಮರಗಳಿಗೆ ಒಂದು ಕತ್ತರಿ ಸಾಕಾಗುತ್ತದೆ ಹಾಗೂ ಒಂದು ಇಲಿನಿಯಂತ್ರಣ ಸಾಧನಕ್ಕೆ ಸುಮಾರು ರೂ 50 ವೆಚ್ಚ ತಗುಲುತ್ತದೆ.

ಈ ಸಾಧಕನ ಸಾಧನೆಗೆ ಅನೇಕ ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಗಿದೆ. ಇವರು ದೇಶ ವಿದೇಶಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರಿಗೆ 2011–12 ನೇ ಸಾಲಿನ ರಾಷ್ಟ್ರೀಯಾ ಕೃಷಿ ಮೇಳದಲ್ಲಿ ಜಿಲ್ಲಾ ಮಟ್ಟದ ರೈತ ಪ್ರಶಸ್ತಿ ನೀಡಿ ಗೌರವಿಸಿದೆ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ :**

ಶ್ರೀ. ಅರುಣ್‌ಕುಮಾರ್ ಎಸ್.ಆರ್.
ಶೆಟ್ಟಿಕೆರೆ ಗ್ರಾಮ @ ಅಂಚೆ,
ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ – 572 226
ಮೊಬೈಲ್ ಸಂಖ್ಯೆ : 9900824420